ದಿನಾಂಕಃ 04.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ: ಶ್ರೀ ಎಸ್ ವಿ ಎಸ್ ವಕೀಲರಿಂದಃ

1. ನಾನು ದ್ವಿತೀಯ ಪಿಯುಸಿಯವರೆಗೂ ಓದಿರುತ್ತೇನೆ. ನನ್ನ ತಂದೆ ಕೃಷ್ಣೇಗೌಡ ಅವರಿಗೆ 3 ಜನ ಮಕ್ಕಳು ಎಂದರೆ ಸರಿ. ನಾನು ಮೊದಲನೇಯವರು ಎಂದರೆ ಸರಿ. ಅರ್ಜಿದಾರರು 2ನೇಯ ಮಗಳು ಎಂದರೆ ಸರಿ. ನಂದೀಶ್ ಕೊನೆಯ ಮಗ ಎಂದರೆ ಸರಿ. ನಂದೀಶ್ ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ನಂದೀಶ ಅವರಿಗೆ ವಿವಾಹವಾಗಿರಲಿಲ್ಲ. ನನ್ನ ತಂದೆ - ತಾಯಿ ಇಬ್ಬರು ಮರಣ ಹೊಂದಿರುತ್ತಾರೆ. ನಂದೀಶ್ ಮರಣ ಹೊಂದುವ ಪೂರ್ವದಲ್ಲಿ ಯಾವುದೇ ವಿಲ್ ಅನ್ನು ಮಾಡಿರುವುದಿಲ್ಲ. ನಂದೀಶ್ ಮರಣ ಹೊಂದಿದ ನಂತರ ಆತ ಖಾತೆ ಹೊಂದಿದ್ದ ನೇರಳೆಕೆರೆಯ ವಿಜಯ ಬ್ಯಾಂಕ್ ನಲ್ಲಿ ನನ್ನ ಪತಿಯ ಬ್ರೇಸ್ ಲೆಟ್ ಅನ್ನು ಅಡಮಾನ ಮಾಡಿರುವುದನ್ನು ನಾನು ಬಿಡಿಸಿಕೊಂಡಿರುತ್ತೇನೆ. ಸದರಿ ಬ್ರೇಸ್ ಲೆಟ್ ನಂದೀಶ್ ಹೊಂದಿದ ವಿಜಯ ಬ್ಯಾಂಕ್ ಖಾತೆಯಲ್ಲಿ ಅಡಮಾನವಾಗಿತ್ತು. ಅದು ಸುಮಾರು 90 ಗ್ರಾಂ ಇತ್ತು. ನಂದೀಶ್ ಬ್ಯಾಂಕ್ ಖಾತೆಯಿಂದ ಯಾವುದೇ ಹಣವನ್ನು ನಾನು ಪಡೆದಿರುವುದಿಲ್ಲ. ನಂದೀಶ್ ಬ್ಯಾಂಕ್ ಖಾತೆಯಲ್ಲಿ ಅಡಮಾನವಾಗಿರುವ ಬ್ರೇಸ್ ಲೆಟ್ ನನ್ನ ಪತಿಯ ಬ್ರೇಸ್ ಲೆಟ್ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬ್ರೇಸ್ ಲೆಟ್ ನನ್ನ ಪತಿಗೆ ಸೇರಿದ್ದು, ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನಂದೀಶ್ 4 ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದರು. ಆತ ಅರಕೆರೆಯ ಕೆನರಾ ಬ್ಯಾಂಕ್, ಅರಕೆರೆಯ ಕಾವೇರಿ ಗ್ರಾಮೀಣ ಬ್ಯಾಂಕ್, ಅರಕೆರೆಯ ಎಸ್ ಬಿ ಐ, ನೇರಳೆಕೆರೆಯ ವಿಜಯಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದನು. ನಂದೀಶ್ ಮರಣ ಹೊಂದಿದ ನಂತರ

ನಾನು ನನ್ನ ತಂಗಿ ಇರುವ ಬಗ್ಗೆ ಬ್ಯಾಂಕ್ ನವರಿಗೆ ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಬ್ಯಾಂಕ್ ನವರು ನಾಮಿನಿ ಯಾರು ಎಂದು ಕೇಳಿದ್ದು, ನಾನು ಅದನ್ನು ಮಾತ್ರ ತಿಳಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಬ್ಯಾಂಕ್ ಗೆ ಯಾವುದೇ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಅವರು ಕೇಳಿರುವುದಿಲ್ಲ.

2. ಅರಕೆರೆಯ ಎಸ್ ಬಿ ಐ ಬ್ಯಾಂಕ್ ನಲ್ಲಿ ನಂದೀಶ್ ಖಾತೆಯಲ್ಲಿ 2 ಚಿನ್ನದ ಲಾಂಗ್ ಸರಗಳು, ಒಂದು ಜೊತೆ ಚಿನ್ನದ ಜುಮುಕಿಗಳು ಹಾಗೂ 3 ಉಂಗುರಗಳು ಇರುತ್ತವೆ. ಸದರಿ ಒಡವೆಗಳು ಒಟ್ಟಿಗೆ ಸುಮಾರು 215 ರಿಂದ 220 ಗ್ರಾಂ ತೂಕವಿರಬಹುದು. ಅರಕೆರೆಯ ಎಸ್ ಬಿ ಐ ಬ್ಯಾಂಕ್ ನಲ್ಲಿ ನನ್ನ ತಮ್ಮ ಲೈಫ್ ಇನ್ಸೂರೆನ್ಸ್ ಅನ್ನು ಪಡೆದಿದ್ದು, ಅದರ ಮೌಲ್ಯ ರೂ. 5 ಲಕ್ಷ ಇರುತ್ತದೆ. ನನ್ನ ತಮ್ಮ ನಂದೀಶ್ ಕೆನರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದು, ಅದರಲ್ಲಿರುವ ಹಣವನ್ನು ನಾನು ಸಹಿ ಮಾಡಿ ಪಡೆದುಕೊಂಡಿರುತ್ತೇನೆ. ಸದರಿ ಹಣವನ್ನು ಗದ್ದೆ ಮಾಡಿದವರಿಗೆ ನೀಡಿರುತ್ತೇನೆ. ಸಾಕ್ಷಿಗೆ ಬ್ಯಾಂಕ್ ನವರು ಸಲ್ಲಿಸಿರುವ ದಾಖಲಾತಿಯನ್ನು ತೋರಿಸಿ ಅದರಲ್ಲಿರುವುದು ಸಹಿ ನಿಮ್ಮದು ಎಂದು ಕೇಳಿದ್ದಲ್ಲಿ ಸಾಕ್ಷಿ ಹೌದು ಎನ್ನುತ್ತಾರೆ. ಆ ಕಾರಣಕ್ಕೆ ಸದರಿ ದಾಖಲಾತಿಯನ್ನು ನಿಪಿ 7 ಎಂದು ಗುರುತಿಸಲಾಗಿದೆ. ಗದ್ದೆ ಮಾಡಿದವರಿಗೆ ನಾನು ಸದರಿ ಹಣವನ್ನು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗದ್ದೆ ಮಾಡಿದವರಿಗೆ ಸದರಿ ಹಣವನ್ನು ನೀಡಿದ್ದೇನೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸದರಿ ಹಣವನ್ನು ನಾನು ಗದ್ದೆ ಮಾಡಿದವರಿಗೆ ನೀಡಿದ್ದೇನೆ ಎಂದು ನನ್ನ ತಕರಾರಿನಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿರುವುದಿಲ್ಲ.

3. ಈ ಕೇಸಿನಲ್ಲಿ ಅರ್ಜಿದಾರರು ಏನು ಹೇಳಿದ್ದಾರೆ ಹಾಗೂ ಏನು ಪರಿಹಾರ ಕೇಳಿದ್ದಾರೆ

ಎಂದು ನಾನು ತಿಳಿದುಕೊಂಡಿದ್ದೇನೆ. ನನ್ನನ್ನು ಮಂಡ್ಯದ ಚಿಕ್ಕಬಾಣಸವಾಡಿಗೆ ಕೊಟ್ಟು ವಿವಾಹ ಮಾಡಿರುತ್ತಾರೆ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ಸಾಕ್ಷಿಗೆ ಬ್ಯಾಂಕ್ ಅವರು ಹಾಜರುಪಡಿಸಿದ ಒಂದು ದಾಖಲಾತಿಯನ್ನು ತೋರಿಸಿ ದದು ನೀವು ಬಿಡಿಸಿಕೊಂಡ ಒಡವೆಗೆ ಸಂಬಂಧಿಸಿದ ರಶೀದಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಕಾರಣಕ್ಕೆ ಸದರಿ ದಾಖಲಾತಿಯ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ ಪುಟವನ್ನು ನಿಪಿ 8 ಎಂದು ಗುರುತಿಸಲಾಗಿದೆ. ಸದರಿ ದಾಖಲಾತಿಯಲ್ಲಿ ಒಂದು ಹರಳಿರುವ ಚಿನ್ನದ ಉಂಗುರವನ್ನು ಸಹ ಬಿಡಿಸಿಕೊಳ್ಳಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಹೌದು ಬಿಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಾನು ನನ್ನ ತಕರಾರಿನಲ್ಲಿ ತನ್ನ ತಮ್ಮನ ಖಾತೆಗಳಲ್ಲಿದ್ದ ಒಡವೆ ಮತ್ತು ಹಣವನ್ನು ಬಿಡಿಸಿಕೊಂಡಿದ್ದೇನೆ ಎಂದು ಹೇಳಿ ಬರೆಸಿರುವುದಿಲ್ಲ. ಆ ರೀತಿ ಹೇಳಿ ಬರೆಸಲು ನನಗೆ ಯಾವುದೇ ರೀತಿ ತೊಂದರೆ ಇರಲಿಲ್ಲ. ಸದರಿ ಮಾಹಿತಿಯನ್ನು ನನ್ನ ವಕೀಲರಿಗೂ ನಾನು ತಿಳಿಸಿರುವುದಿಲ್ಲ. ವಿಜಯ ಬ್ಯಾಂಕ್ ಮತ್ತು ಎಸ್ ಬಿ ಐ ಬ್ಯಾಂಕ್ ನಲ್ಲಿರುವ ಒಡವೆಗಳು ಒಟ್ಟು ಕುಟುಂಬದ ಒಡವೆಗಳು ಎಂದರೆ ಸರಿಯಲ್ಲ. ಸದರಿ ಒಡವೆಗಳನ್ನು ನಾನು ನನ್ನ ತಂದೆ, ತಾಯಿ, ತಂಗಿ ಮತ್ತು ತಮ್ಮ ಉಪಯೋಗಿಸುತ್ತಿದ್ದೆವು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಹೆಣ್ಣು ಮಕ್ಕಳು ತಾಯಿಯ ಒಡವೆಗಳನ್ನು ಧರಿಸಿಕೊಳ್ಳುತ್ತಾರೆ ಎಂದರೆ ಸರಿ. ನಿ ಆರ್ 1 ರಿಂದ 3 ರಲ್ಲಿ ಕಾಣುವ ಒಡವೆಗಳು ನನ್ನ ತಾಯಿಗೆ ಸಂಬಂಧಿಸಿದ ಒಡವೆಗಳು ಎಂದರೆ ಸರಿಯಲ್ಲ. ನನ್ನ ತಂದೆಗೆ ಮದುವೆ ಮಾಡಲು ಶಕ್ತಿ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಮದುವೆ ಮಾಡಲು ಶಕ್ತಿ ಇರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಆರ್ 1 ರಿಂದ 3 ನನಗೆ ಸಂಬಂಧಿಸಿದ ಒಡವೆಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಆರ್ 1 ರಿಂದ 3 ಒಡವೆಗಳು ನನ್ನ ಸಂಬಂಧಿಸಿದ್ದು ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ದಾಖಲಾತಿ ಹಾಜರುಪಡಿಸಿರುತ್ತೇನೆ. ನಾನು

ಒಡವೆ ಮಾಡಿದವರು ನೀಡಿರುವ ಬಿಲ್ಲನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ಬಿಲ್ಲನ್ನು ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಜಯ ಬ್ಯಾಂಕ್ ಮತ್ತು ಎಸ್ ಬಿ ಐ ಬ್ಯಾಂಕ್ ನಲ್ಲಿರುವ ಒಡವೆಗಳು ನನಗೆ ಸಂಬಂಧಿಸಿದ್ದು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಒಡವೆಗಳು ನನಗೆ ಸೇರಿದ್ದು ಎಂದು ತೋರಿಸಲು ದಾಖಲಾತಿಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಒಡವೆಗಳನ್ನು ನಾನೇ ಇಟ್ಟುಕೊಳ್ಳಬೇಕೆಂಬ ದುರುದ್ದೇಶದಿಂದ ಅದು ನನಗೆ ಸೇರಬೇಕು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಮನೆ ಕಟ್ಟಲು ನನ್ನ ಒಡವೆಗಳನ್ನು ನಾನು ಕೊಟ್ಟಿದ್ದೆ ಎಂದು ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಕಟ್ಟಿದ್ದಾರೆ ಎಂದು ನಾನು ಹೇಳುತ್ತಿರುವ ಮನೆ ನಮ್ಮ ಒಟ್ಟು ಕುಟುಂಬದ ಆದಾಯದಿಂದ ಎಲ್ಲರೂ ಕುಟುಂಬದವರು ಸೇರಿ ಕಟ್ಟಿದ ಮನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆತನಿಗೆ ಮದುವೆ ಮಾಡಬೇಕೆಂಬ ಉದ್ದೇಶದಿಂದ ನನ್ನ ಒಡವೆಗಳನ್ನು ನೀಡಿ ಕೈಸಾಲವನ್ನು ಪಡೆದು ಣಹವನ್ನು ಆತನಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ನನ್ನ ತಮ್ಮನಿಗೆ ಮದುವೆ ಮಾಡಬೇಕೆಂಬ ಉದ್ದೇಶದಿಂದ ನನ್ನ ಒಡವೆಗಳನ್ನು ನೀಡಿ ಕೈಸಾಲವನ್ನು ಪಡೆದು ಹಣವನ್ನು ಆತನಿಗೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆಯನ್ನು ಯಾವಾಗ ಕಟ್ಟಿಸಿದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ.

4. ಅರಕೆರೆ ಸಿನಿಮಾ ಥಿಯೇಟರ್ ಹಿಂದೆ ಇರುವ ಸೈಟನ್ನು ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿ ಅದು ನನ್ನ ತಂದೆ ಇದ್ದಾಗಲೇ ಮಾರಾಟವಾಗಿದೆ ಎಂದು ನುಡಿಯುತ್ತಾರೆ. ಸದರಿ

ಸೈಟಯನ್ನು ನನ್ನ ತಂದೆ ಯಾವಾಗ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆಗ ನಾನು ನನ್ನ ಪತಿಯ ಮನೆಯಲ್ಲಿದ್ದೆ. ನನ್ನ ತಂದೆ ಮರಣ ಹೊಂದಿ 16 ವರ್ಷವಾಗಿರುತ್ತದೆ. ಮೃತ ನಂದೀಶ್ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ನಂದೀಶ್ ಯೋಗಕ್ಷೇಮವನ್ನು ನನ್ನ ತಂಗಿ ನೋಡಿಕೊಳ್ಳುತ್ತಿರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಆಕೆ 18 ವರ್ಷದ ಹಿಂದೆ ಯಾರನ್ನೋ ಪ್ರೀತಿಸಿ ಓಡಿಹೋಗಿದ್ದಳು ಎಂದು ನುಡಿಯುತ್ತಾರೆ. ಅರ್ಜಿದಾರರು ಯಾರನ್ನೋ ಪ್ರೀತಿಸಿ ಓಡಿಹೋಗಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಪತಿ ಬ್ಯಾಂಕ್ ನಲ್ಲಿ ಕೆಲಸ ಮಾಡುವುದನ್ನು ಅರ್ಜಿದಾರರು ದುರುಪಯೋಪಡಿಸಿಕೊಂಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಮ್ಮ ಒಟ್ಟು ಕುಟುಂಬದ ಸ್ವತ್ತುಗಳಿಗೆ ಸಂಬಂಧಿಸಿದಂತೆ ಭಾಗಾಂಶದ ಕೇಸ್ ನಡೆಯುತ್ತಿದೆ ಎಂದರೆ ಸರಿ. ಸದರಿ ಭಾಗಾಂಶದ ಕೇಸಿನಲ್ಲಿ ಮನೆ ಮತ್ತು ಇತರ ಸ್ವತ್ತುಗಳನ್ನು ಸೇರಿಸಲಾಗಿದೆ ಎಂದರೆ ಸರಿ. ನಾನು ನನ್ನ ತಂದೆ ತಾಯಿ ಮರಣ ಹೊಂದಿದ ನಂತರ ನಾನು ಬೆಂಗಳೂರಿನಲ್ಲಿದ್ದ ಕಾರಣ ನಂದೀಶ್ ಅವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಅವರು ಮರಣ ಹೊಂದಿದ ನಂತರ ನಾನೇ ಅವರ ಉತ್ತರಕ್ರಿಯಾದಿ ಅನ್ನು ಮಾಡಿ ನಂದೀಶ್ ಯೋಗಕ್ಷೇಮ ವನ್ನು ನೋಡಿಕೊಂಡು ಆತನ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. ನಂದೀಶ್ ಅವರ ಶವಸಂಸ್ಕಾರ ಮತ್ತು ಉತ್ತರಕ್ರಿಯಾದಿ ಅನ್ನು ನಾನು ಮತ್ತು ಅರ್ಜಿದಾರರು ಸೇರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಒಬ್ಬಳೇ ಆತನ ಎಲ್ಲಾ ಕಾರ್ಯವನ್ನು ಮಾಡಿರುತ್ತೇನೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಬ್ಯಾಂಕ್ ಅವರು ಹಾಜರುಪಡಿಸಿರುವ ಒಂದು ದಾಖಲಾತಿಯನ್ನು ತೋರಿಸಿ ಅದು ನಿಮ್ಮ ಆಧಾರ್ ಕಾರ್ಡ್ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಕಾರಣಕ್ಕೆ ಸದರಿ ದಾಖಲಾತಿಯನ್ನು ನಿಪಿ 9 ಎಂದು ಗುರುತಿಸಲಾಗಿದೆ. ನಂದೀಶ್ ಅವರು ಸಾಯುವ ಪೂರ್ವದಲ್ಲಿ ಅರಕರೆಯಲ್ಲಿ ವಾಸವಾಗಿದ್ದರು. ನಿಪಿ9 ರಲ್ಲಿರುವುದು ಬೆಂಗಳೂರಿನ ವಾಸ ಎಂದರೆ ಸರಿ. ನಂದೀಶ್ ಮರಣ ಹೊಂದಿದ ದಿನದಿಂದಲೂ ನಾನು ಅರಕೆರೆಯಲ್ಲಿ ವಾಸವಾಗಿದ್ದೇನೆ. ನನ್ನ ಪತಿ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ನನ್ನೊಂದಿಗೆ ನನ್ನ ಮಗಳು ವಾಸವಾಗಿದ್ದು, ಆಕೆ ದ್ವಿತೀಯ ಪಿಯುಸಿ ಅನ್ನು ಶಾಂತಂ ಕಾಲೇಜ್ ನಲ್ಲಿ ಓದಿತ್ತಿದ್ದಾಳೆ. ನನ್ನ ಮಗ ನನ್ನ ಪತಿಯೊಂದಿಗೆ ಬೆಂಗಳಾರಿನಲ್ಲಿದ್ದು, ಆತ ಡಾನ್ ಬಾಸ್ಕೋದಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾನೆ. ಸಾಕ್ಷಿ ಸ್ವತಃ ನನ್ನ ಹಾಗೂ ನನ್ನ ಪತಿಯ ನಡುವೆ ಈ ಒಡವೆಗಳ ವಿಚಾರವಾಗಿ ಜಗಳವಾಗಿದ್ದು, ನಾನು ಒಡವೆ ತರುವವರೆಗೂ ಮನೆಗೆ ಸೇರಿಸುವುದಿಲ್ಲ ಎಂದು ನನ್ನನ್ನು ಇಲ್ಲೇ ಬಿಟ್ಟು ಹೋಗಿದ್ದಾರೆ ಎಂದು ಹೇಳುತ್ತಾರೆ. ನನ್ನ ಪತಿಯ ಈ ಒಡವೆಗಳ ವಿಚಾರವಾಗಿ ಜಗಳ ಮಾಡಿ ನನ್ನನ್ನು ತವರು ಮನೆಯಲ್ಲೇ ಬಿಟ್ಟು ಹೋಗಿದ್ದಾರೆ ಎಂಬ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿರುವುದಿಲ್ಲ. ನಾನು ಮೇಲೆ ಹೇಳಿರುವ ವಿಚಾರವನ್ನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತಿಯ ವಿರುದ್ದ ನಾನು ಜೀವನಾಂಶದ ಕೇಸು ಅಥವಾ ಬೇರೆ ಯಾವುದೇ ಕೇಸು ಹಾಕಿರುವುದಿಲ್ಲ. ನಾನು ಮತ್ತು ನನ್ನ ಪತಿ ಅನ್ಯೋನ್ಯವಾಗಿದ್ದರೂ ಸಹ ಒಡವೆಯನ್ನು ಪಡೆಯಬೇಕೆಂಬ ದುರುದ್ದೇಶದಿಂದ ನಾನು ಕಟ್ಟು ಕತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂದೀಶ್ ಅವರಿಗೆ ಸೇರಿರುವ ಚರ ಆಸ್ತಿಗಳಲ್ಲಿ ನನಗೂ ಹಾಗೂ ಅರ್ಜಿದಾರರಿಗೆ ಸಮಾನ ಪಾಲು ಇದೆ ಎಂದರೆ ಸರಿಯಲ್ಲ. ನಂದೀಶ್ ಜೀವಂತವಾಗಿದ್ದಾಗ ನಾನು ಮತ್ತು ಅರ್ಜಿದಾರರು ಸಮಾನವಾಗಿ ಆತನನ್ನು ನೋಡಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಅಣ್ಣ ಸೋಮಾಚಾರಿ

ಜುವೆಲರಿ ವರ್ಕ್ಸ್ ಅವರ ಬಳಿ ಷೆಡ್ಯೂಲ್ ಒಡವೆ ಮಾಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಡವೆ ಮಾಡಿದವರ ಹೆಸರು ಮಂಜು ಎಂದು ನುಡಿಯುತ್ತಾರೆ. ನಾನು ಸದರಿ ವಿಚಾರವನ್ನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿ ಷೆಡ್ಯೂಲ್ ಒಡವೆಗಳಿಗೆ ನಾನೇ ಮಾಲೀಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ